ಪಿಡಬ್ಲ್ಯೂಃ1

ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿ ವಿಚಾರಣೆ ಒಳಪಟ್ಟಿದು, ಅವರನ್ನು ಪಿಡಬ್ಲೂ-1 ಎಂದು ಪರಿಗಣಿಸಿ ಇಂದು ದಿನಾಂಕಃ 02.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿಯ ಪರ ಶ್ರೀ ಎನ್ ವಿ ಪಿ ವಕೀಲರಿಂದಃ

ನಾನು ನನ್ನ ಮೌಖಿಕ ವಿಚಾರಣೆಯ ಬದಲಾಗಿ ನನ್ನ ಮುಖ್ಯ ವಿಚಾರಣಾ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ನಿಜವಿರುತ್ತವೆ ಮತ್ತು ಅವುಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿಗಳು ನನ್ನದೇ ಇರುತ್ತವೆ. ಮುಂದುವರೆದು ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ಗುರುತಿಸಬೇಕೆಂದು ಕೋರುತ್ತೇನೆ .

| ಕ್ರ.ಸಂಖ್ಯೆಃ | ಹಾಜರುಪಡಿಸಿದ ದಾಖಲಾತಿಗಳು | ನಿಶಾನಿಸಲ್ಪಟ್ಟ ಸಂಖ್ಯೆಗಳು |
|---|---|---|
| 1. | ದಿನಾಂಕ 29-07-2019 ರಂದು ವಾದಿ ನಂ.3 ರವರು ಪ್ರತಿವಾದಿಯರಿಗೆ ಬರೆದುಕೊಟ್ಟ ಶುದ್ದ ಕ್ರಯಪತ್ರದ ದೃಡೀಕೃತ ಪ್ರತಿಯನ್ನು ಹಾಜರಪಡಿಸಿದ್ದು ಅದನ್ನು | ನಿಪಿ-1 |
| 2. | ಸರ್ವೆನಂ. 141/2 ರ ಆರ್ ಟಿ ಸಿ ಯ ದೃಡೀಕೃತ ಪ್ರತಿಯನ್ನು ಹಾಜರಪಡಿಸಿದ್ದು ಅದನ್ನು | ನಿಪಿ-2 |
| 3. | ಸರ್ವೆನಂ. 120/1 ರ ಆರ್ ಟಿ ಸಿ ಯ ದೃಡೀಕೃತ ಪ್ರತಿಯನ್ನು ಹಾಜರಪಡಿಸಿದ್ದು ಅದನ್ನು | ನಿಪಿ-3 |

ಈ ಮೇಲ್ಕಂಡಂತೆ ದಾಖಲಾತಿಗಳನ್ನು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.